<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ</u>
<u>ಶ್ರೀರಂಗಪಟ್ಟಣ</u>

<u>ಸಿ.ಸಿ.632/2021</u>

| | |
|---|---|
| ಸಿ.ಡಬ್ಲ್ಯೂ : | 9 |
| ಪಿ.ಡಬ್ಲ್ಯೂ : | 5 |

| | | |
|---|---|---|
| ಸಾಕ್ಷಿದಾರರ ಹೆಸರು | : | ಗಿರೀಶ್ ಕೆ.ಎನ್ |
| ತಂದೆ/ ಪತಿಯ ಹೆಸರು | : | ನಾಗರಾಜು |
| ವಯಸ್ಸು | : | 39 ವರ್ಷ |
| ವೃತ್ತಿ | : | ಪಿ.ಎಸ್.ಐ. ಕೊಣನೂರು ಪೊಲೀಸ್ ಠಾಣೆ, ಹಾಸನ ಜಿಲ್ಲೆ |
| ವಾಸ | : | ಕೊಣನೂರು , ಹಾಸನ ಜಿಲ್ಲೆ |

**<u>ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 18.02.2025</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ</u>**

ನಾನು ಏಪ್ರಿಲ್ 2021 ರಿಂದ ಜುಲೈ 2022 ರವರರೆಗೆ ಅರಕೆರೆ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ25.04.2021 ರಂದು ನಾನು ಅರಕೆರೆ ಪೊಲೀಸ್ ಠಾಣೆಗೆ ವರ್ಗಾವಣೆ ಆಗಿ ಬಂದಿದ್ದು, ಚಾಸಾ 1 ರವರಿಂದ ಈ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ . ದಿನಾಂಕ 10.05.2021 ರಂದು ಚಾಸಾ. 7 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಈಗ FSL ವರದಿಯನ್ನು ತೋರಿಸಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು ಗುರುತಿಸಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿ ವಿರುದ್ದ ಆರೋಪಿ ಸಾಬೀತಾದ ಕಾರಣ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ</u>

ದೂರು ನೀಡುವ ಸಂದರ್ಬದಲ್ಲಿ ನಾನು ಠಾಣೆಯಲ್ಲಿ ಇರಲಿಲ್ಲ ಎಂದರೆ ಸರಿ. ಆದ ಕಾರಣ ನಾನು ಈ ಪ್ರಕರಣವನ್ನು ಸಂಪೂರ್ಣವಾಗಿ ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯ ಸಮಯದಲ್ಲಿ ನಾನು ಸಾಕ್ಷಿದಾರರ ಮರು ವಿಚಾರಣೆ ಮಾಡಿರುವುದಿಲ್ಲ. ನಾನು ಮುಂದುವರೆದ ತನಿಖೆಯನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ನೀವು ಕಡತವನ್ನು ಚಾಸಾ.1 ರವರಿಂದ ಪಡೆದುಕೊಂಡಿರುತ್ತೀರಿ ಎಂದು ಹೇಳಿರುತ್ತೀರಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಚಾಸಾ.1 ರವರು ನಿಮ್ಮ ಇಲಾಖೆಯ ಅಧಿಕಾರಿ ಆಗಿರುವ ಕಾರಣ ಅವರ ಗೌರವಕ್ಕೆ ಕುಂದು ಉಂಟಾಗುತ್ತದೆ ಎನುವ ಕಾರಣಕ್ಕಾಗಿ ಬಿ ವರದಿಯನ್ನು ಸಲ್ಲಿಸುವ ಬದಲು ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ವಿರುದ್ದ ಯಾವುದೇ ಆರೋಪಿ ಸಾಬೀತಾಗದೆ ಇದ್ದರೂ ಸಹಾ ಸುಳ್ಳು ದೋಷರೋಪಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಓ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.